ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 5–8–2017

# ಪತ್ರಿಕಾ ಪ್ರಕಟಣೆ

## ಆಗಸ್ಟ್ 15 ರ ಬದಲು ಆಗಸ್ಟ್ 16 ರಂದು ಇಂದಿರಾ ಕ್ಯಾಂಟೀನ್ ಉದ್ಘಾಟನೆ, ಸಮಾರಂಭಕ್ಕೆ ರಾಹುಲ್ ಗಾಂಧಿ ಬರುವ ಸಾಧ್ಯತೆ : ಸಿದ್ದರಾಮಯ್ಯ

ಬೆಂಗಳೂರು, ಆಗಸ್ಟ್ 5 ( ಕರ್ನಾಟಕ ವಾರ್ತೆ) :

ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಎಲ್ಲೆಡೆ ಅತ್ಯಧಿಕ ಕಾರ್ಯ ಒತ್ತಡವಿರುವ ಹಿನ್ನೆಲೆಯಲ್ಲಿ ಬಡವರು, ಕಡು ಬಡವರು ಹಾಗೂ ಶ್ರಮಿಕರಿಗೆ ರಿಯಾಯಿತಿ ದರದಲ್ಲಿ ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಹಾಗೂ ರಾತ್ರಿಯ ಭೋಜನ ಒದಗಿಸುವ ಇಂದಿರಾ ಕ್ಯಾಂಟೀನ್ ಯೋಜನೆ ಆಗಸ್ಟ್ 15 ರ ಬದಲು ಆಗಸ್ಟ್ 16 ರಂದು ಉದ್ಘಾಟನೆ ಆಗಲಿದೆ. ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷ ರಾಹುಲ್ ಗಾಂಧಿ ಅವರು ಉದ್ಘಾಟನಾ ಸಮಾರಂಭಕ್ಕೆ ಆಗಮಿಸುವ ಸಾಧ್ಯತೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಇಂದು ಪ್ರಕಟಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಕಾರ್ಯಕ್ರಮ ಬೆಂಗಳೂರು ನಗರ ಪ್ರದಕ್ಷಿಣೆಯ ನಂತರ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮತನಾಡುತ್ತಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳ ಪೈಕಿ 125 ವಾರ್ಡ್‌ಗಳಲ್ಲಿ ಪ್ರತಿ ವಾರ್ಡ್‌ಗೆ ಒಂದರಂತೆ 125 ಇಂದಿರಾ ಕ್ಯಾಂಟೀನ್‌ಗಳು ಆಗಸ್ಟ್ 16 ರಂದು ಲೋಕಾರ್ಪಣೆಯಾಗಲಿವೆ. ಉಳಿದ 73 ಇಂದಿರಾ ಕ್ಯಾಂಟೀನ್‌ಗಳನ್ನು ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ 150 ನೇ ಜನ್ಮ ದಿನಾಚರಣೆಯ ದಿನವಾದ ಅಕ್ಟೋಬರ್ 2 ರಂದು ಪ್ರಾರಂಭಿಸಲು ಯೋಜಿಸಲಾಗಿದೆ ಎಂದು ಸಿದ್ದರಾಮಯ್ಯ ಅವರು ವಿವರಿಸಿದರು.

ಅನ್ನ ಕೊಡುವ ಯೋಜನೆಗೆ ಅಡೆ ತಡೆ ಬೇಡ

ಸಾರ್ವಜನಿಕ ಉಪಯೋಗ ಹಾಗೂ ನಾಗರೀಕ ಸೌಲಭ್ಯಗಳಿಗೆ ಮೀಸಲಿರುವ ಆಟದ ಮೈದಾನಗಳು ಹಾಗೂ ಉದ್ಯಾನಗಳಲ್ಲಿ ಇಂದಿರಾ ಕ್ಯಾಂಟೀನ್ ಪ್ರಾರಂಭಿಸಲು ಹೊರಟಿರುವುದನ್ನು ಕೆಲವು ಸಂಘಟನೆಗಳು ವಿರೋಧಿಸುತ್ತಿವೆ ಎಂಬುದನ್ನು ಮಾಧ್ಯಮದವರು ಗಮನಕ್ಕೆ ತಂದಾಗ, ಯಾವುದೇ ಘೋಷಿತ ಆಟದ ಮೈದಾನಗಳೂ ಅಥವಾ ಘೋಷಿತ ಉದ್ಯಾನಗಳಲ್ಲಿ ಇಂದಿರಾ ಕ್ಯಾಂಟೀನ್ ತಲೆ ಎತ್ತುತ್ತಿಲ್ಲ. ಬದಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಾಮ್ಯದಲ್ಲಿರುವ ಅಥವಾ ಸರ್ಕಾರಿ ಜಮೀನಿನಲ್ಲಿಯೇ ಇಂದಿರಾ ಕ್ಯಾಂಟೀನ್‌ಗಳನ್ನು ಪ್ರಾರಂಭಿಸಲಾಗುತ್ತಿದೆ ಎಂದು ಸ್ಪಷ್ಟಪಡಿಸಿದ ಸಿದ್ದರಾಮಯ್ಯ ಅವರು ಹಸಿದವರಿಗೆ ಅನ್ನ ಕೊಡುವ ಯೋಜನೆಗೆ ಯಾರೂ ಅಡೆ-ತಡೆಗಳನ್ನು ಉಂಟು ಮಾಡಬಾರದು ಎಂದು ಸಲಹೆ ನೀಡಿದರು.

ತರಾತುರಿ ಏನಿಲ್ಲ

ಇಂದಿರಾ ಕ್ಯಾಂಟೀನ್ ಪ್ರಾರಂಭಕ್ಕೆ ಇಷ್ಟೊಂದು ತರಾತುರಿ ಏಕೆ ? ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು ಬೇಗ ಮಾಡಿದರೆ ತರಾತುರಿ ಎಂದು ಬಣ್ಣಿಸುತ್ತೀರಿ. ವಿಳಂಬ ಮಾಡಿದರೆ ವ್ಯವಸ್ಥೆಯನ್ನೇ ಸೋಮಾರಿ ಎಂದು ಹೀಗೆಳೆಯುತ್ತೀರಿ. ಬಡವರ ಕೆಲಸವನ್ನು ತರಾತುರಿಯಲ್ಲೇ ಮಾಡಬೇಕು. ರಾಜ್ಯ ಆಯವ್ಯಯದಲ್ಲಿಯೇ ಘೋಷಿತವಾಗಿರುವ ಈ ಯೋಜನೆಯನ್ನು ತರಾತುರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿಲ್ಲ. ನಿಗಧಿಯಂತೆಯೇ ಸಕಾಲದಲ್ಲಿಯೇ ಅನುಷ್ಠಾನಗೊಳಿಸಲಾಗುತ್ತಿದೆ. ಬಡವರಿಗೆ ಅನುಕೂಲವಾಗಲಿರುವ ಯೋಜನೆಗಳನ್ನು ಜಾರಿಗೆ ತರುವುದನ್ನು ಕೆಲವರು ಸಹಿಸಿಕೊಳ್ಳುವುದಿಲ್ಲ. ಅನ್ನಭಾಗ್ಯ ಯೋಜನೆಯ ಅನುಷ್ಠಾನಕ್ಕೂ ಕೆಲವರು ವಿರೋಧ ವ್ಯಕ್ತಪಡಿಸಿದ್ದರು. ಬಡವರ-ಪರ ಯೋಜನೆಗಳಿಗೆ ಸಹಕರಿಸಬೇಕು ಎಂದು ಅವರು ಮಾಧ್ಯಮದವರಲ್ಲಿ ಮನವಿ ಮಾಡಿದರು.

ಅವಧಿ-ಪೂರ್ವ ಚುನಾವಣೆ ಇಲ್ಲ

ತಮ್ಮ ಸರ್ಕಾರವು 2013 ನೇ ಸಾಲಿನ ಮೇ 13 ರಂದು ಅಸ್ತಿತ್ವಕ್ಕೆ ಬಂದಿದೆ. ಅಂತೆಯೇ, ಹದಿನಾಲ್ಕನೇ ವಿಧಾನ ಸಭೆಯು ಮೇ 28 ರಂದು ರಚನೆಯಾಗಿದೆ. ಆದಕಾರಣ, ರಾಜ್ಯ ವಿಧಾನ ಸಭೆಗೆ ಅವಧಿ-ಪೂರ್ವ ಚುನಾವಣೆಯ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದ ಸಿದ್ದರಾಮಯ್ಯ ಅವರು ಈ ಬಗ್ಗೆ ಹರಿದಾಡುತ್ತಿರುವ ಊಹಾಪೋಹಗಳನ್ನು ತಳ್ಳಿ ಹಾಕಿದರು. ಅಲ್ಲದೇ, ತಮ್ಮ ಸರ್ಕಾರದ ಅವಧಿ ಪೂರ್ಣಗೊಂಡ ನಂತರವೇ ನಿಗಧಿತ ದಿನಾಂಕದಂದೇ ರಾಜ್ಯ ವಿಧಾನಸಭೆಗೆ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ ಎಂದರು.

ಮೆಟ್ರೋ ನಿಲ್ದಾಣ ರಸ್ತೆಗಳಲ್ಲಿ ಪಾದಚಾರಿ ಮಾರ್ಗ

ಉದ್ಯಾನ ನಗರದಲ್ಲಿ ಮೆಟ್ರೋ ನಿಲ್ದಾಣಗಳಿಗೆ ಸಂಪರ್ಕ ಕಲ್ಪಿಸುವ ಎಂಟು ಪ್ರಮುಖ ರಸ್ತೆಗಳ 729 ಕಿಲೋ ಮೀಟರ್ ಪಾದಚಾರಿ ಮಾರ್ಗಗಳನ್ನು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದ ಸಹಯೋಗದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಭಿವೃದ್ಧಿಪಡಿಸುತ್ತಿದೆ. ಇದೀಗ 40 ಕೋಟಿ ರೂ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಮುಖ್ಯಮಂತ್ರಿ ಮಾಹಿತಿ ನೀಡಿದರು.

ಮಳೆ ನೀರು ಗಾಲುವೆ

ನಗರದಲ್ಲಿ ಒಟ್ಟು 800 ಕೋಟಿ ರೂ. ವೆಚ್ಚದಲ್ಲಿ 408 ಬೃಹತ್ ಮಳೆ ನೀರು ಗಾಲುವೆಗಳ ಪೈಕಿ 223 ಮಳೆ ನೀರು ಗಾಲುವೆ ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಸುಮಾರು 192 ಕಿಲೋ ಮೀಟರ್ ಉದ್ದದ ಕಾಮಗಾರಿಗಳಲ್ಲಿ 24 ಕಿಲೋ ಮೀಟರ್ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. ಅಲ್ಲದೇ, 58 ಕಿಲೋ ಮೀಟರ್ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ. ಅಂತೆಯೇ, 83 ಕಿಲೋ ಮೀಟರ್ ಕಾಮಗಾರಿಗಳು ಪ್ರಾರಂಭಿಕ ಹಂತದಲ್ಲಿವೆ.

ನವೆಂಬರ್ ಒಂದರೊಳಗೆ ವೃಕ್ಷೋದ್ಯಾನ

ನಗರದ ಹೆಚ್. ಎಸ್. ಆರ್ ಬಡಾವಣೆಯಲ್ಲಿ ಒಂಭತ್ತೂವರೆ ಎಕರೆ ಪ್ರದೇಶದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎರಡೂವರೆ ಕೋಟಿ ರೂ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಐದು ಕೋಟಿ ರೂ ಆರ್ಥಿಕ ಪಾಲು ದಾರಿಕೆಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವ ವೃಕ್ಷೋಧ್ಯಾನದ ಚಟುವಟಿಕೆಗಳು ನವೆಂಬರ್ ಒಂದರೊಳಗೆ ಪೂರ್ಣಗೊಳ್ಳಲಿವೆ.

ಮುಂದಿನ ಮೂರು ತಿಂಗಳಲ್ಲಿ ಪೂರ್ಣ

ಸುಮಾರು 40 ಕೋಟಿ ರೂ ವೆಚ್ಚದಲ್ಲಿ ನಗರದ ಮಹಾತ್ಮ ಗಾಂಧಿ ರಸ್ತೆಯಲ್ಲಿ ಚಾಲನೆ ನೀಡಿರುವ ಪಾದಚಾರಿ ಮಾರ್ಗ ಹಾಗೂ ಚರ್ಚ್ ರಸ್ತೆಯ ಇಕ್ಕೆಲೆಗಳಲ್ಲಿ ಹೊಸ ಮಾದರಿಯ ಗ್ರಾನೈಟ್ ಅಳವಡಿಸಿರುವ ಟೆಂಡರ್ ಶ್ಯೂರ್ ರಸ್ತೆಗಳನ್ನು ಮುಂದಿನ ಮೂರು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು.

ಮೇಸ್ತ್ರಿ ಪಾಳ್ಯದ ಕೆರೆಯ ಸಮೀಪದಲ್ಲಿ ಏಳು ಕೋಟಿ ರೂ ವೆಚ್ಚದಲ್ಲಿ ಉದ್ಯಾನ ಕಾಮಗಾರಿಗಳು ಅಕ್ಟೋಬರ್ 2 ರೊಳಗೆ ಪೂರ್ಣಗೊಳ್ಳಲಿದೆ. ಅಂತೆಯೇ, ಸಂಕೇತ-ರಹಿತ ಮೊಗಸಾಲೆಗಾಗಿ ಹೊರ ವರ್ತುಲ ರಸ್ತೆಯಲ್ಲಿ ನಿರ್ಮಿಸುತ್ತಿರುವ ಮೇಲ್ಸೇತುವೆ ನವೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ.

ನಗರದ ಮೂಲ ಸೌಲಭ್ಯಕ್ಕೆ ದಾಖಲೆಯ ಅನುದಾನ

ರಸ್ತೆಗಳ ಅಭಿವೃದ್ಧಿ, ಸೇತುವೆಗಳ ನಿರ್ಮಾಣ, ಮಳೆ ನೀರು ಗಾಲುವೆಗಳ ಅನುಷ್ಠಾನ ಒಳಗೊಂಡಂತೆ ನಗರದ ಮೂಲ ಸೌಲಭ್ಯ ಕಲ್ಪಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಾತ್ರವೇ ಪ್ರಸಕ್ತ ಸಾಲಿನಲ್ಲಿ 7300 ಕೋಟಿ ರೂ ಅನುದಾನ ಒದಗಿಸಲಾಗಿದೆ. ಇದು ನಗರದ ಇತಿಹಾಸದಲ್ಲೇ ಒಂದು ದಾಖಲೆ ಮಾತ್ರವಲ್ಲ, ಒಂದು ಸಾಧನೆಯೂ ಆಗಿದೆ. ಇದರಿಂದ ಉದ್ಯಾನ ನಗರಿ ಬೆಂಗಳೂರಿಗೆ ಹೊಸ ರೂಪ ಕೊಡಲು ಸಾಧ್ಯವಾಗುತ್ತದೆ ಎಂದು ಸಿದ್ದರಾಮಯ್ಯ ಅವರು ತಿಳಿಸಿದರು.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಉಚಿತ ಮನೆ

ಇದೇ ಸಂದರ್ಭದಲ್ಲಿ ನಗರದ ರಾಜೇಂದ್ರನಗರ ಕೊಳಚೆ ಪ್ರದೇಶದಲ್ಲಿ 625 ಮನೆಗಳ ನಿರ್ಮಾಣಕ್ಕೆ ಮುಖ್ಯಮಂತ್ರಿ ಚಾಲನೆ ನೀಡಿದರು. ಐದು ಲಕ್ಷ ರೂ ವೆಚ್ಚದ ಪ್ರತಿ ಮನೆಗೆ ನಾಲ್ಕೂವರೆ ಲಕ್ಷ ರೂ ಸಹಾಯ ಧನ ದೊರೆಯಲಿದೆ. ಉಳಿಕೆ ಮೊತ್ತ ಐವತ್ತು ಸಾವಿರ ರೂ ಗಳನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ. ವಿಶೇಷ ಘಟಕ ಯೋಜನೆಯ ಅನುದಾನದಲ್ಲಿ ಪರಿಶಿಷ್ಟ ಜಾತಿಯ ಫಲಾನುಭವಿಗಳಿಗೆ ಹಾಗೂ ಗಿರಿಜನ ಉಪ ಯೋಜನೆಯ ಅನುದಾನದಲ್ಲಿ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಫಲಾನುಭವಿ ಭರಿಸಬೇಕಾದ ಐವತ್ತು ಸಾವಿರ ರೂ ಮೊತ್ತವನ್ನೂ ಒದಗಿಸಿ ಮನೆಗಳನ್ನು ಸಂಪೂರ್ಣ ಉಚಿತವಾಗಿ ಒದಗಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು. ಕೊಳಗೇರಿ ನಿವಾಸಿಗಳ ನೀರಿನ ಶುಲ್ಕ ಮನ್ನಾ ಮಾಡಿ, ಪ್ರತಿ ಮಾಹೆ ಪ್ರತಿ ಮನೆಗೆ ಹತ್ತು ಸಾವಿರ ಲೀಟರ್ ಕುಡಿಯುವ ನೀರು ಉಚಿತವಾಗಿ ಒದಗಿಸುವ ಐತಿಹಾಸಿಕ ಯೋಜನೆಯ ಹಿಂದಿನ ಸರ್ಕಾರದ ಕಳಕಳಿ ಕುರಿತೂ ಮುಖ್ಯಮಂತ್ರಿ ಬೆಳಕು ಚೆಲ್ಲಿದರು.

ಅಧಿಕಾರಿ ಅಮಾನತ್ತು

ಈ ಮುನ್ನ, ಮಹಾತ್ಮಗಾಂಧಿ ರಸ್ತೆಯ ಪಾದಚಾರಿ ಮಾರ್ಗದ ವೀಕ್ಷಣೆಯಿಂದ ಪ್ರಾರಂಭವಾದ ಮುಖ್ಯಮಂತ್ರಿಯವರ ನಗರ ಪ್ರದಕ್ಷಿಣೆ ಪೂರ್ಣಗೊಳ್ಳಲು ಸುಮಾರು ನಾಲ್ಕು ತಾಸುಗಳಾಯಿತು. ಹೆಚ್ ಎಸ್ ಆರ್ ಬಡಾವಣೆಯಲ್ಲಿ ಅನಧಿಕೃತ ಬಹು ಮಹಡಿ ಕಟ್ಟಡಗಳ ನಿರ್ಮಾಣವನ್ನು ತಡೆಯಲು ವಿಫಲರಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತ ವೆಂಕಟೇಶ್ ಎಂಬುವವರನ್ನು ಅಮಾನತ್ತುಗೊಳಿಸುವಂತೆ ಪಾಲಿಕೆಯ ಆಯುಕ್ತರಿಗೆ ಮುಖ್ಯಮಂತ್ರಿ ಸ್ಥಳದಲ್ಲೇ ಆದೇಶಿಸಿದರು.

ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರೂ ಆದ ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ. ಜೆ. ಜಾರ್ಜ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕರಾದ ದಿನೇಶ್ ಗುಂಡೂರಾವ್, ವಿ. ಎಸ್. ಉಗ್ರಪ್ಪ, ರಿಜ್ವಾನ್ ಅರ್ಷದ್, ವಿನಿಷಾ ನೀರೋ,

ಬೆಂಗಳೂರಿನ ಮಹಾಪೌರರಾದ ಜಿ. ಪದ್ಮಾವತಿ, ಉಪ ಮಹಾಪೌರ ಎಂ ಆನಂದ, ಬೆಂಗಳೂರು ಮೆಟ್ರೋ ರೈಲು ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಸಿಂಗ್ ಖರೋಲಾ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎಲ್ ಕೆ ಅತೀಕ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತ ಎನ್. ಮಂಜುನಾಥ ಪ್ರಸಾದ್, ಬೆಂಗಳೂರು ನಗರ ಪೋಲೀಸ್ ಆಯುಕ್ತ ಟಿ ಸುನೀಲ್ ಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಡಾ ಪಿ ಎಸ್ ಹರ್ಷ ಅವರೂ ಮುಖ್ಯಮಂತ್ರಿಯವರ ನಗರ ಪ್ರದಕ್ಷಿಣೆಯ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

*************

ಡಿ ಪಿ ಎಂ

ಮುಖ್ಯಮಂತ್ರಿ ನಗರ ಸಂಚಾರ

## ದುರ್ಬಲ ವರ್ಗದವರ ಏಳಿಗೆಗೆ ಸರ್ಕಾರ ಬದ್ಧ: ಮುಖ್ಯಮಂತ್ರಿ ಸಿದ್ದರಾಮಯ್ಯ

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)–

ಮನುಷ್ಯನಿಗೆ ವಸತಿ ಅನ್ನ ನೀರು, ವಿದ್ಯೆ ಅತಿ ಮುಖ್ಯ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದ್ದು, ದುರ್ಬಲ ವರ್ಗದವರ ಏಳಿಗೆಗಾಗಿ ಸದಾ ಶ್ರಮಿಸುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಅವರು ಇಂದು ಬೆಂಗಳೂರು ನಗರದ ವಿವಿಧ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿ ಪರಿಶೀಲನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಕೋರಮಂಗಲದ ರಾಜೇಂದ್ರ ನಗರದಲ್ಲಿ ಏರ್ಪಡಿಸಲಾಗಿದ್ದ ಕೊಳೆಗೇರಿ ನಿವಾಸಿಗಳಿಗೆ 625 ಮನೆಗಳ ನಿರ್ಮಾಣ ಕಾರ್ಯಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಮುಖ್ಯಮಂತ್ರಿಯವರು ಈ ಯೋಜನೆಯಡಿ ಸರ್ಕಾರದ ವತಿಯಿಂದ ಪ್ರತಿ ಮನೆಗೆ 4.5 ಲಕ್ಷ ರೂ. ಅನುದಾನ ಒದಗಿಸಲಾಗುತ್ತಿದ್ದು, ಫಲಾನುಭವಿಯು 50 ಸಾವಿರ ರೂ. ಗಳನ್ನು ಪಾವತಿಸಬೇಕು. ಒಟ್ಟು 5 ಲಕ್ಷ ರೂ. ಘಟಕ ವೆಚ್ಚದಲ್ಲಿ ಮನೆ ನಿರ್ಮಾಣ ಮಾಡಲಾಗುತ್ತಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ 50 ಸಾವಿರ ರೂ. ಗಳನ್ನು ಪಾವತಿಸಲು ಕಷ್ಟ ಸಾಧ್ಯವಾಗಿರುವುದರಿಂದ ಬಿಬಿಎಂಪಿಯ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಯೋಜನೆಯಡಿ ಲಭ್ಯವಿರುವ ಅನುದಾನದಲ್ಲಿ ಈ ಮೊತ್ತವನ್ನು ಭರಿಸುವಂತೆ ಆಯುಕ್ತರಿಗೆ ಸೂಚಿಸಿದರು.

ನಗರದ ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಪ್ರತಿ ತಿಂಗಳಿಗೆ 10 ಸಾವಿರ ಲೀಟರ್ ನೀರನ್ನುಉಚಿತವಾಗಿ ಪೂರೈಸಲಾಗುತ್ತಿದ್ದು, ಹಳೆಯ ಬಾಕಿ ಬಿಲ್‌ಅನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗಿದೆ ಎಂದು ತಿಳಿಸಿದರು.

ನಮ್ಮ ಸರ್ಕಾರ ಬಡ ಜನತೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ಅನ್ನಭಾಗ್ಯ ಪ್ರಮುಖ ಕಾರ್ಯಕ್ರಮ. ಯಾರೂ ಕೂಡ ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಅನ್ನಭಾಗ್ಯ ಯೋಜನೆ ಜಾರಿಗೆ ತರಲಾಗಿದೆ. ಕರ್ನಾಟಕ ಹಸಿವು ಮುಕ್ತ

ರಾಜ್ಯವಾಗಬೇಕೆನ್ನುವುದು ನನ್ನ ಗುರಿ. ಸರ್ಕಾರಗಳು ದುರ್ಬಲ ವರ್ಗದವರಿಗೆ ಹೆಚ್ಚಿನ ಶಕ್ತಿ ನೀಡುವ ಕೆಲಸ ಮಾಡಬೇಕು ಎಂದು ನುಡಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ನಮ್ಮ ಸರ್ಕಾರ ಗುಡಿಸಲು ವಾಸಿಗಳಿಗೆ ಎಲ್ಲ ರೀತಿಯ ಮೂಲಸೌಲಭ್ಯ ಒದಗಿಸಲು ಬದ್ಧವಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮಹಾತ್ಮಾಗಾಂಧಿ ರಸ್ತೆಯ ಟೆಂಡರ್‌ಶ್ಯೂರ್ ಪಾದಚಾರಿ ಮಾರ್ಗ ಕಾಮಗಾರಿ ವೀಕ್ಷಣೆ, ಕಾವೇರಿ ಎಂಪೋರಿಯಂಗೆ ಭೇಟಿ ನೀಡಿದರು. ನಂತರ ಬ್ರಿಗೇಡ್‌ರಸ್ತೆ, ಚರ್ಚ್‌ಸ್ಟ್ರೀಟ್‌ನ ಟೆಂಡರ್ ಶ್ಯೂರ್ ಕಾಮಗಾರಿ ಪರಿಶೀಲನೆ ನಡೆಸಿದರು. ಕಾರ್ಮಿಕರೊಂದಿಗೆ ಸಂಭಾಷಣೆ ನಡೆಸಿ, ಯೋಗಕ್ಷೇಮ ವಿಚಾರಿಸಿದರು.

ಆಡುಗೋಡಿಯ 6.4 ಕೋಟಿ ರೂ. ವೆಚ್ಚದ ಹೊಸೂರು ಲಷ್ಕರ್ ರಸ್ತೆಯ ಹೊಸ ಮೇಲುಸೇತುವೆ ನಿರ್ಮಾಣ ಕಾಮಗಾರಿ, ಕೋರಮಂಗಲ ವಾರ್ಡ್ ಸಂಖ್ಯೆ 147ರ ಕಾಮಗಾರಿ ವೀಕ್ಷಣೆ, ಮೇಸ್ತ್ರಿಪಾಳ್ಯ ಉದ್ಯಾನವನ ಹಾಗೂ ಕೆರೆ ಅಭಿವೃದ್ಧಿ ಕಾಮಗಾರಿ ವೀಕ್ಷಣೆ, ಹೆಚ್‌ಎಸ್‌ಆರ್ ಲೇಔಟ್‌ನ ಸ್ವಾಭಿಮಾನಿ ಉದ್ಯಾನವನ ಕಾಮಗಾರಿ, ಈಜಿಪಾಳ್ಯ ಹಾಗೂ ಜಯನಗರ ವಾರ್ಡ್‌ನಂ. 153 ಇಂದಿರಾ ಕ್ಯಾಂಟಿನ್ ಕಾಮಗಾರಿ ಪ್ರಗತಿ, ಹೊರವರ್ತುಲ ರಸ್ತೆಯ ಸಿಗ್ನಲ್ ಮುಕ್ತ ಕಾರಿಡಾರ್ ಕಾಮಗಾರಿ ವೀಕ್ಷಣೆ ಹಾಗೂ ಪದ್ಮನಾಭನಗರ ಬನಶಂಕರಿ 2 ನೇ ಹಂತದಲ್ಲಿ ನಡೆಯುತ್ತಿರುವ ಕೆಳಸೇತುವೆ ಕಾಮಗಾರಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಸಚಿವರಾದ ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಮೇಯರ್ ಪದ್ಮಾವತಿ, ಶಾಸಕರಾದ ದಿನೇಶ್ ಗುಂಡೂರಾವ್, ಎನ್.ಎ. ಹ್ಯಾರಿಸ್, ವಿನಿಶಾ ನೀರೋ, ವಿಧಾನ ಪರಿಷತ್ ಸದಸ್ಯರಾದ ವಿ.ಎಸ್. ಉಗ್ರಪ್ಪ, ರಿಜ್ವಾನ್ ಅರ್ಷದ್, ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್, ಬೆಂಗಳೂರು ಪೊಲೀಸ್ ಆಯುಕ್ತ ಟಿ. ಸುನಿಲ್‌ಕುಮಾರ್, ಬೆಂಗಳೂರು ನಗರ ಜಿಲ್ಲಾಧಿಕಾರಿ ವಿ. ಶಂಕರ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಡಾ. ಎಲ್.ಕೆ. ಅತೀಕ್, ನಗರಾಭಿವೃದ್ಧಿ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಮಹೇಂದ್ರ ಜೈನ್, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್‌ಕುಮಾರ್ ಸಿಂಗ್ ಖರೋಲಾ, ಬಿಡಿಎ ಆಯುಕ್ತ ರಾಕೇಶ್ ಸಿಂಗ್, ವಿವಿಧ ನಿಗಮ ಮಂಡಳಿಗಳ ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಡಾ. ಹರ್ಷ ಪಿ.ಎಸ್. ಮೊದಲಾದವರು ಹಾಜರಿದ್ದರು.

## ನಗರಕ್ಕೆ ಉಪರಾಷ್ಟ್ರಪತಿಗಳ ಆಗಮನ

ಬೆಂಗಳೂರು, ಆಗಸ್ಟ್ 5 ( ಕರ್ನಾಟಕ ವಾರ್ತೆ) :

ಭಾರತದ ಗೌರವಾನ್ವಿತ ಉಪ ರಾಷ್ಟ್ರಪತಿ ಮೊಹಮದ್ ಹಮೀದ್ ಅನ್ಸಾರಿ ಅವರು ಇಂದು ಸಂಜೆ ನಗರದ ಹೆಚ್.ಎ.ಎಲ್. ವಿಮಾನನಿಲ್ದಾಣದಲ್ಲಿ ಆಗಮಿಸಿದರು. ರಾಜ್ಯಪಾಲ ವಜುಭಾಯಿ ವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಟಿ.ಬಿ. ಜಯಚಂದ್ರ, ಮುಖ್ಯ ಕಾರ್ಯದರ್ಶಿ, ಸುಭಾಷ್ ಚಂದ್ರ ಕುಂಟಿಆ, ಡಿ.ಜಿ.ಐ.ಜಿ.ಪಿ. ಆರ್.ಕೆ. ದತ್ತಾ, ಜಿಲ್ಲಾಧಿಕಾರಿ ವಿ. ಶಂಕರ್, ನಗರ ಪೊಲೀಸ್ ಆಯುಕ್ತ

ಸುನಿಲ್‌ಕುಮಾರ್ ಅವರುಗಳು ಉಪರಾಷ್ಟ್ರಪತಿಗಳನ್ನು ಬರಮಾಡಿಕೊಂಡರು. ಉಪ ರಾಷ್ಟ್ರಪತಿಗಳು ಘಟಿಕೋತ್ಸವದಲ್ಲಿ ಭಾಗವಹಿಸುವರು.

## ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಮದನ್.ಬಿ.ಲೋಕೂರ್ ಅವರಿಂದ ಮಕ್ಕಳ ಸ್ನೇಹಿ ನ್ಯಾಯಾಲಯ ಉದ್ಘಾಟನೆ

**ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಯ ಮಕ್ಕಳ ಸ್ನೇಹಿ ನ್ಯಾಯಾಲಯವನ್ನು ಸುಪ್ರೀಂಕೋರ್ಟ್ ನ್ಯಾಯಾಮೂರ್ತಿಗಳು ಹಾಗೂ ಬಾಲ ನ್ಯಾಯ ಸಮಿತಿಯ ಅಧ್ಯಕ್ಷರಾದ ನ್ಯಾಯಾಮೂರ್ತಿ ಮದನ್ ಬಿ. ಲೋಕೂರ್ ಅವರು ಇಂದು ನಗರದ ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ಉದ್ಘಾಟಿಸಿದರು.

ಈ ನ್ಯಾಯಾಲಯಗಳು 2012 ರ ಪೋಕ್ಸೋ ಅಧಿನಿಯಮವು ಕಡ್ಡಾಯಗೊಳಿಸಿರುವಂತೆ ಕಾರ್ಯನಿರ್ವಹಿಸಲಿವೆ. 2012 ರ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮವು ಪ್ರಕರಣಗಳ ಶೀಘ್ರ ವಿಲೇವಾರಿಯನ್ನು ಮತ್ತು ಸಂಬಂಧಿಸಿದ ಪ್ರಕ್ರಿಯೆಯನ್ನು ಸರಿಯಾಗಿ ಪಾಲಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಬೆದರಿಕೆ ಮುಕ್ತ ಮತ್ತು ಮಕ್ಕಳ ಸೂಕ್ಷ್ಮತೆಗೆ ಅನುಗುಣವಾಗಿರುವ ವಾತಾವರಣದಲ್ಲಿ ಕಾರ್ಯನಿರ್ವಹಿಸುವ ವಿಶೇಷ ನ್ಯಾಯಾಲಯಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪಿಸುವುದನ್ನು ಕಡ್ಡಾಯಗೊಳಿಸಿದೆ.

ಶಾಸನ ವಿಧಿಸಿದ ಈ ಅಗತ್ಯಕ್ಕನುಗುಣವಾಗಿ ಮತ್ತು ಮಕ್ಕಳ ಹಕ್ಕುಗಳು ಹಾಗೂ ಗೌರವವನ್ನು ಎತ್ತಿ ಹಿಡಿಯುವ ಸಲುವಾಗಿ ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಅಶೋಕ್ ಬಿ. ಹಿಂಚಿಗೇರಿ ಅವರ ನೇತೃತ್ವದಲ್ಲಿನ ಕರ್ನಾಟಕ ಉಚ್ಛ ನ್ಯಾಯಾಲಯದ ಬಾಲ ನ್ಯಾಯ ಸಮಿತಿಯು ಬೆಂಗಳೂರು ನಗರ ಜಿಲ್ಲೆಯಲ್ಲಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಸಿವಿಲ್ ನ್ಯಾಯಾಲಯ ಸಂಕೀರ್ಣದಲ್ಲಿ ಅಂತಹ ಒಂದೊಂದು ನ್ಯಾಯಾಲಯವನ್ನು ಸ್ಥಾಪಿಸುವ ಪ್ರಾಯೋಗಿಕವಾಗಿ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಈ ವಿಶೇಷ ನ್ಯಾಯಾಲಯಗಳನ್ನು ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯಡಿ ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಒದಗಿಸಿರುವ 32 ಲಕ್ಷ ರೂ. ಗಳ ಹಣಕಾಸಿನ ಬೆಂಬಲದೊಂದಿಗೆ ಸ್ಥಾಪಿಸಲಾಗಿದೆ. ಈ ಆವರಣವು ಎರಡು ನ್ಯಾಯಾಲಯ ಸಭಾಂಗಣಗಳನ್ನು ಹೊಂದಿದ್ದು ವೇದಿಕೆಯು ಎತ್ತರದ ಸ್ಥಳದಲ್ಲಿದ್ದು ಬೇರೆ ಕಾರಿಡಾರ್‌ಗಳಿಗೆ ಬೇರೆ ಬೇರೆ ಸಂಪರ್ಕ ಒದಗಿಸಿ ಮಕ್ಕಳಿಗೆ ಮತ್ತು ಅವರ ಪೋಷಕರಿಗೆ ಸೋಫಾಗಳನ್ನು ಒದಗಿಸಿ ಮಗುವಿನೊಡನೆ ಸೂಕ್ಷ್ಮ ರೀತಿಯಲ್ಲಿ ಸಂಭಾಷಿಸಿ ಮಗುವನ್ನು ಆರಾಮ ಸ್ಥಿತಿಯಲ್ಲಿರುವಂತೆ ಮಾಡಬಹುದಾಗಿದೆ.

ಮಗುವು ಆಪಾದಿತನನ್ನು ನೋಡದಿರುವಂತೆ ಕಟಕಟೆಯ ಕಡೆಗೆ ಗಾಜನ್ನು ಅಳವಡಿಸಲಾಗಿದ್ದು, ಒಂದು ವೇಳೆ ಮಗುವು ನ್ಯಾಯಾಲಯದಲ್ಲಿ ಸಾಕ್ಷಿ ಹೇಳು ಇಚ್ಛಿಸದೇ ಇದ್ದ ಸಂದರ್ಭದಲ್ಲಿ ಆ

ಮಗುವಿನ ಕುಟುಂಬವು ನಿರೀಕ್ಷಣಾ ಕೊಠಡಿಯಿಂದಲೇ ವ್ಯವರಿಸಬಹುದು.ಇಲ್ಲಿ ಮಕ್ಕಳಿಗೆ ಆಟಿಕೆಗಳ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಒಂದು ಅಡುಗೆ ಮನೆಯನ್ನು ಸಹ ನಿರ್ಮಿಸಲಾಗಿದೆ

ಈ ಸಂದರ್ಭದಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಸುಬ್ರೋ ಕಮಲ್ ಮುಖರ್ಜಿ ಮತ್ತು ಗೌರವಾನ್ವಿತ ನ್ಯಾಯಾಮೂರ್ತಿ ಅಶೋಕ್ ಬಿ. ಹಿಂಚಿಗೇರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಉಮಾ ಮಹದೇವನ್, ನ್ಯಾಯಾಧೀಶರು, ವಕೀಲರು ಉಪಸ್ಥಿತರಿದ್ದರು.

ಎಸ್‌ಎಂ:ಕೆಎನ್‌ಕೆ:ಜಿಪಿಆರ್

# ನಕ್ಷತ್ರ ವೀಕ್ಷಣೆ ಕಾರ್ಯಕ್ರಮ

**ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)**

**ಜವಾಹರ್‌ಲಾಲ್ ನೆಹರು ತಾರಾಲಯ ಹಾಗೂ ಬೆಂಗಳೂರು ಅಸೋಸಿಯೇಷನ್ ಫಾರ್ ಸೈನ್ಸ್ ಎಜುಕೇಷನ್ ವತಿಯಿಂದ ಆಗಸ್ಟ್ 6 ರಂದು ಭಾನುವಾರ ಸಂಜೆ 6.30 ಗಂಟೆಗೆ ನಗರದ ಶ್ರೀ ಟಿ. ಚೌಡಯ್ಯ ರಸ್ತೆ, ಹೈ ಗ್ರೌಂಡ್ಸ್, ಬೆಂಗಳೂರು – 560 001 ಇಲ್ಲಿ "ನಕ್ಷತ್ರ ವೀಕ್ಷಣೆ" ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.**

**ಹೆಚ್ಚಿನ ವಿವರಗಳಿಗೆ ದಊರವಾಣಿ – 2237 9725/2226 6084 ಅಥವಾ ಅನ್ನು ಸಂಪರ್ಕಿಸಬಹುದಾಗಿದೆ.**

**ಎಸ್‌ಎಂ:ಜಿಪಿಆರ್.**

# 'NIDHI AAPKE NIKAT' OR PF NEAR YOU'

**Bengaluru, Aug 5th (Karnataka Information)**

**'Nidhi Aapke Nikat' or PF Near You' will be held on 10th August, 2017 as per the following schedule in the Regional Office, Peenya of Employees' Provident Fund Organisation.**

**Slots alotted are-**

**For Subscribers - 10.30 AM to 1.00 PM, For Employers : 3.00PM to 4.00 PM, For exempted establishments located in the jurisdiction 4.00 pm to 5.00 pm**

**This program will be held in The Regional Office, Peenya, No. 62, 3rd Cross, Industrial Suburb, Yeshwantpur II Stage, Bengaluru-560 022, Telephone 23571377.**

**All the stakeholders concerned i.e., employees, employers, trade unions and employers associations may send their suggestions, grievances and doubts on or before 8th August, 2017 to the above address.**

**They can also represent in persons on 10.08.2017. Any further information on this new initiative of 'Nidhi Aapke Nikat' may be obtained from our website www.epfinida.gov.in (http://www.epfindia.com/Circvulras/Y2015-16/Publicity-NidhiAapkeNikat-7781.pdf).**

## ಸಂತಾಪ

ಬೆಂಗಳೂರು, ಆಗಸ್ಟ್ 5 (ಕರ್ನಾಟಕ ವಾರ್ತೆ)

ಸ್ವಾತಂತ್ರ ಹೋರಾಟಗಾರರೂ ಹಾಗೂ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಮಾಜಿ ಅಧ್ಯಕ್ಷ ಎಂ.ಹೆಚ್. ನರಸಿಂಹಯ್ಯ ಅವರು ಇತ್ತೀಚೆಗೆ ನಿಧನರಾಗಿದ್ದು ಇವರ ನಿಧನಕ್ಕೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷ ಹೆಚ್.ಸಿ. ರುದ್ರಪ್ಪ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ತುರುವೇಕೆರೆ ತಾಲ್ಲೂಕು ಮಾಯಸಂದ್ರ ಗ್ರಾಮದವರಾದ ಶ್ರೀ ನರಸಿಂಹಯ್ಯನವರು 2003 ರಿಂದ 2005 ರವರೆಗೆ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು ಎಂಬುದನ್ನು ಅವರು ಸ್ಮರಿಸಿಕೊಂಡಿದ್ದಾರೆ.